ಸಿ.ಸಿ.ನಂ.876/2023

ಪಿ.ಡಬ್ಲೂಃ 1– ಎಸ್. ರಾಜೇಶ್ ಬಿನ್ ಎ. ಸೋಹನ್ ಲಾಲ್

ದಿನಾಂಕಃ 19/03/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಕೆ.ವಿ.ವಿ. ವಕೀಲರಿಂದ**

5. ಆರೋಪಿಯು ನನ್ನ ನೋಟೀಸಿಗೆ ಉತ್ತರ ಕೊಟ್ಟಿದ್ದು ನಾನು ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ಆರೋಪಿಯು ತಮ್ಮ ಉತ್ತರದಲ್ಲಿ ತಮ್ಮ ಬ್ಯಾಂಕ್ ಖಾತೆ ಬಂದ್ ಆಗಿರುತ್ತದೆ ಎಂದು ಹೇಳಿದ್ದು ಆ ಬಗ್ಗೆ ನಾನು ಬ್ಯಾಂಕಿನಲ್ಲಿ ವಿಚಾರಣೆ ಮಾಡಿರುವುದಿಲ್ಲ. ಆರೋಪಿಯು ನನ್ನ ಮಗನಿಗೂ ಸಹ ಪರಿಚಯವಿರುತ್ತಾರೆ ಕಾರಣ ಆರೋಪಿಯು ನನ್ನ ಫ್ಯಾಕ್ಟರಿಗೆ ಬರುತ್ತಿರುತ್ತಾರೆ.

6. ನನ್ನ ಮತ್ತು ಆರೋಪಿಯ ಮಧ್ಯೆ 2017–18 ರಲ್ಲಿ ಒಂದು ಹಣಕಾಸಿನ ವ್ಯವಹಾರ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಆರೋಪಿಯು ನನ್ನ ಹತ್ತಿರ ರೂ.3 ಲಕ್ಷಗಳನ್ನು ಪಡೆದುಕೊಂಡು ನಿಪಿ–1 ಚೆಕ್ಕನ್ನು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ ಆದರೆ ಪ್ರಸ್ತುತ ವ್ಯವಹಾರಕ್ಕೆ ಸಂಬಂಧಿಸಿ ಸದರಿ ಚೆಕ್ಕನ್ನು ಕೊಟ್ಟಿರುತ್ತಾರೆ. ಸದರಿ 2017–18 ರ ವ್ಯವಹಾರಕ್ಕೆ ಸಂಬಂಧಿಸಿ ದಿನಾಂಕ 26.06.2018 ರಂದು ಆರೋಪಿಯು ನನ್ನ ಬ್ಯಾಂಕ್ ಖಾತೆಗೆ ನೆಫ್ಟ್ ಮೂಲಕ ರೂ.1 ಲಕ್ಷಗಳನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಆಗ ಆರೋಪಿಯು ನನಗೆ ನಗದು ರೂಪದಲ್ಲಿ ರೂ.50 ಸಾವಿರಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದಲ್ಲದೇ ಆರೋಪಿಯು ನನ್ನ ಮಗನ ಬ್ಯಾಂಕ್ ಖಾತೆಗೆ ದಿನಾಂಕ 26.08.2020 ರಂದು ರೂ.25 ಸಾವಿರ, ದಿನಾಂಕ 28.09.2020 ರಂದು ನನ್ನ ಖಾತೆಗೆ ರೂ.25 ಸಾವಿರಗಳು, ದಿನಾಂಕ 05.11.2020 ರಂದು ನನ್ನ ಮಗನ ಖಾತೆಗೆ ರೂ.25 ಸಾವಿರಗಳು, ದಿನಾಂಕ

11.12.2020 ರಂದು ನನ್ನ ಮಗನ ಖಾತೆಗೆ ರೂ.25 ಸಾವಿರಗಳು ಮತ್ತು ದಿನಾಂಕ 15.01.2021 ರಂದು ನನ್ನ ಖಾತೆಗೆ ರೂ.25 ಸಾವಿರಗಳನ್ನು ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2017–18 ರ ವ್ಯವಹಾರಕ್ಕೆ ಸಂಬಂಧಿಸಿ ಉಳಿಕೆ ಹಣವಾದ ರೂ.30,450/– ಗಳನ್ನು ಆರೋಪಿಯು ನನ್ನ ಖಾತೆಗೆ ದಿನಾಂಕ 08.04.2021 ರಂದು ವರ್ಗಾವಣೆ ಮಾಡಿ ಸಂಪೂರ್ಣ ಸಾಲದ ಮೊತ್ತವನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ನನ್ನ ಜೊತೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಆರೋಪಿಯು ನನಗೆ ಭದ್ರತೆಗಾಗಿ ಕೊಟ್ಟಿದ್ದ ನಿಪಿ–1 ಚೆಕ್ಕನ್ನು ವಾಪಸ್ಸು ಕೇಳಿದಾಗ ನಾನು ಅದನ್ನು ಕೊಡದೇ ಅದನ್ನು ದುರ್ಬಳಕೆ ಮಾಡಿ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ಆರೋಪಿಯು ತಮ್ಮ ಬ್ಯಾಂಕ್ ಖಾತೆಯನ್ನು ದಿನಾಂಕ 11.04.2022 ರಂದು ಬಂದ್ ಮಾಡಿ ಸದರಿ ವಿಚಾರವನ್ನು ನನ್ನ ಗಮನಕ್ಕೆ ತಂದು ಚೆಕ್ಕನ್ನು ವಾಪಸ್ಸು ಕೇಳಿದ್ದರೂ ಸಹ ನಾನು ಅದನ್ನು ಕೊಡದೇ ದುರುಪಯೋಗ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಜೊತೆ 2017–18 ರಲ್ಲಿ ಮಾಡಿದ್ದ ವ್ಯವಹಾರವನ್ನು ಸಂಪೂರ್ಣವಾಗಿ ಮುಕ್ತಾಯ ಉಳಿಸಿರುವುದರಿಂದ ಈಗ ಅವರು ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್